ವಿಶಾಖ ಎನ್.

# ಗರ್ಭಿಣಿ ಆದರೇನಂತೆ... ರಿವಾಲ್ವರ್ ಹಿಡಿದ ದೀಪಿಕಾ



ಶಕ್ತಿ ಶೆಟ್ಟಿ ಎನ್ನುವ ಪಾತ್ರಕ್ಕೆ ಜೀವ ತುಂಬಲು ದೀಪಿಕಾ ಪಡುಕೋಣೆ ಈ ಹೊತ್ತಿನಲ್ಲಿಯೂ ಸಂಕಲ್ಪ ಮಾಡಿರುವುದು ಅಚ್ಚರಿಯ ವಿದ್ಯಮಾನ. ಯಾಕೆಂದರೆ, ಶಕ್ತಿ ಶೆಟ್ಟಿ ಹೇಳಿಕೇಳಿ ಪೊಲೀಸ್ ಅಧಿಕಾರಿ. ದೀಪಿಕಾ ಈಗ ಗರ್ಭಿಣಿ. ಹೀಗಿರುವಾಗ, 'ಸಾಹಸ ದೃಶ್ಯಗಳ ಸಿನಿಮಾದಲ್ಲಿ ಹೇಗಪ್ಪಾ ನಟಿಸುತ್ತಾರೆ' ಎಂದವರ ಅಭಿಮಾನಿಗಳಲ್ಲಿ ಕೆಲವರು ಅದಾಗಲೇ ಸಾಮಾಜಿಕ ಮಾಧ್ಯಮದ ಪೋಸ್ಟ್‌ಗಳಿಗೆ ಕಾಮೆಂಟ್‌ಗಳನ್ನು ಬರೆಯಲಾರಂಭಿಸಿದ್ದಾರೆ.

'ಸಿಂಗಂ' ತಮಿಳು ಸಿನಿಮಾದ ರೀಮೇಕ್ ಅನ್ನೇ ತಮ್ಮ ಬ್ರ್ಯಾಂಡ್ ಮಾಡಿಕೊಂಡಿರುವ ರೋಹಿತ್ ಶೆಟ್ಟಿ, ಈ ವಿಷಯದಲ್ಲಿ ಇತ್ತೀಚೆಗೆ ಅಗಲಿದ ಕನ್ನಡದ ದ್ವಾರಕೀಶ್ ಅವರನ್ನು ಹೋಲುತ್ತಾರೆ. ದ್ವಾರಕೀಶ್ ಕೂಡ ತಮಿಳಿನಲ್ಲಿ ಹಿಟ್ ಆದ ಚಿತ್ರಗಳನ್ನು ಲಗುಬಗನೆ ಕನ್ನಡದಲ್ಲಿ ರೀಮೇಕ್ ಮಾಡುತ್ತಿದ್ದರು. ಅವರು ನಿರ್ಮಾಪಕರೂ ಆಗಿದ್ದರು. ರೋಹಿತ್ ನಿರ್ಮಾಪಕರನ್ನು ಹುಡುಕುವುದರಲ್ಲಿ ನಿಷ್ಣಾತರು ಎನ್ನುವುದಷ್ಟೆ ವ್ಯತ್ಯಾಸ.

ದೀಪಿಕಾ ತಾವು ಗರ್ಭಿಣಿಯಾಗಿರುವ ಸಂಗತಿಯನ್ನು ಫೆಬ್ರುವರಿಯಲ್ಲಿ ತಿಳಿಸಿದ್ದರು. ಈಗ ಸುಡುಧಗೆಯಲ್ಲಿ ಅವರು 'ಲೇಡಿ ಸಿಂಗಂ' ಪಾತ್ರದಲ್ಲಿ 'ಸಿಂಗಂ ಎಗೇನ್' ಚಿತ್ರೀಕರಣದಲ್ಲಿ ತೊಡಗಿಕೊಂಡರು. 'ಬನ್' ಆಕಾರದಲ್ಲಿ ತುರುಬು ಕಟ್ಟಿಕೊಂಡು, ಖಾಕಿಧಾರಿಯಾಗಿ ನಿಂತರು. ಕಪ್ಪು ಕನ್ನಡಕವನ್ನೂ ಹಾಕಿಕೊಂಡು ಫಳಫಳ ಹೊಳೆದರು. 'ನೀಳಕಾಯದ ಅವರು ದೃಷ್ಟಿ ತೆಗೆಯುವಷ್ಟು ಆಕರ್ಷಕ' ಎಂದೂ ಕೆಲವು ಅಭಿಮಾನಿಗಳು ಈ ಲುಕ್‌ಗೆ ಫಿದಾ ಆಗಿ, ಕಾಮೆಂಟ್‌ಗಳನ್ನು ಮಾಡಿದ್ದಾರೆ.

'ನಾರಿ ಸೀತೆಯ ರೂಪವೂ ಹೌದು, ದುರ್ಗಿಯೂ ಹೌದು. ಪೊಲೀಸ್ ಜಗತ್ತಿನ ಕ್ರೂರ, ಹಿಂಸಾ ಮಹಿಳಾ ಅಧಿಕಾರಿ ಇದೋ... ಶಕ್ತಿ ಶೆಟ್ಟಿ... ನನ್ನ ಲೇಡಿ ಸಿಂಗಂ... ದೀಪಿಕಾ ಪಡುಕೋಣೆ' ಎಂದು ರೋಹಿತ್ ಶೆಟ್ಟಿ ತಮ್ಮದೇ ಕಚ್ಚಾ ಶೈಲಿಯ ಸಂದೇಶವೊಂದನ್ನು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್‌ಮಾಡಿ, ಈ ಚಿತ್ರದ ಸುದ್ದಿಯನ್ನು ಮೊದಲು ತೇಲಿಬಿಟ್ಟಿದ್ದರು.

ಅರ್ಜುನ್ ಕಪೂರ್ ಈ ಸಿನಿಮಾದಲ್ಲಿ ಖಳನ ಪಾತ್ರದಲ್ಲಿ ನಟಿಸಲಿದ್ದಾರೆ. ಅಜಯ್ ದೇವಗನ್, ಕರೀನಾ ಕಪೂರ್ ಖಾನ್, ಅರ್ಜುನ್ ಕಪೂರ್ ಹಾಗೂ ಟೈಗರ್ ಶ್ರಾಫ್ ಎಲ್ಲರನ್ನೂ ಒಂದೆಡೆ ಕಲೆಹಾಕಿ, 'ಸಿಂಗಂ ಎಗೇನ್' ಸಿನಿಮಾಗಾಗಿ ಒಂದು ಹಾಡನ್ನು ರೋಹಿತ್ ಶೆಟ್ಟಿ ಚಿತ್ರೀಕರಿಸಲಿದ್ದಾರೆ. ಆ ಹಾಡಿನ ಚಿತ್ರೀಕರಣದಲ್ಲಿ ದೀಪಿಕಾ ಭಾಗವಹಿಸುವುದಿಲ್ಲ.

ತಮ್ಮ ಆರೋಗ್ಯದ ಕಾಳಜಿಯನ್ನೂ ಇಟ್ಟುಕೊಂಡು, ಸಿನಿಮಾ ಚಿತ್ರೀಕರಣಕ್ಕೂ ಒಡ್ಡಿಕೊಂಡು ಸಮತೋಲನ ಕಾಪಾಡಿಕೊಳ್ಳುವ ದೀಪಿಕಾ ನಿರ್ಧಾರವನ್ನು ಅನೇಕರು ಮೆಚ್ಚಿಕೊಂಡಿದ್ದಾರೆ.

## 'ಒಟಿಟಿಗೆ ಸಿನಿಮಾ ಲೇಟಾಗಿ ಬರಲಿ'

ಒಟಿಟಿಯಲ್ಲಿ ಯಾವಾಗ ಚಿತ್ರ ತೆರೆಕಾಣಬೇಕು ಎಂಬ ವಿಷಯದ ಚರ್ಚೆ ಕಾಲಿವುಡ್‌ನಲ್ಲಿ ಚಿತ್ರಮಂದಿರಗಳ ಮಾಲೀಕರು, ಪ್ರದರ್ಶಕರು, ವಿತರಕರು, ನಿರ್ಮಾಪಕರ ನಡುವೆ ಕಳೆದ ಕೆಲವು ದಿನಗಳಿಂದ ಕಾವು ಪಡೆದುಕೊಂಡಿದೆ.

ಸದ್ಯಕ್ಕೆ ಚಿತ್ರಮಂದಿರಗಳಲ್ಲಿ ಸಿನಿಮಾ ಬಿಡುಗಡೆಯಾದ ಕನಿಷ್ಠ ನಾಲ್ಕು ವಾರಗಳ ನಂತರ ಒಟಿಟಿಯಲ್ಲಿ ತೆರೆಕಾಣಬೇಕು ಎಂಬ ತೀರ್ಮಾನವಿದೆ. ಜಿ.ವಿ. ಪ್ರಕಾಶ್ ಕುಮಾರ್ ಹಾಗೂ ಮಮತಾ ಬೈಜು ಅಭಿನಯದ 'ರೆಬೆಲ್' ತಮಿಳು ಸಿನಿಮಾ, ಚಿತ್ರಮಂದಿರಗಳಲ್ಲಿ ಬಿಡುಗಡೆಯಾದ ಎರಡೇ ವಾರಗಳಲ್ಲಿ ಒಟಿಟಿ ವೇದಿಕೆಯಲ್ಲೂ ತೆರೆಕಂಡಿತು. ಈ ಬೆಳವಣಿಗೆಯ ನಂತರ ಅಲ್ಲಿನ ನಿರ್ಮಾಪಕರು ಕನಿಷ್ಠ ನಾಲ್ಕು ವಾರ ಚಿತ್ರಮಂದಿರಗಳಲ್ಲೇ ಸಿನಿಮಾ ಓಡಲು ಅವಕಾಶ ನೀಡಬೇಕೆಂದು ತೀರ್ಮಾನಿಸಿದರು. ಇದೀಗ ಚಿತ್ರಮಂದಿರದಲ್ಲಿ ಬಿಡುಗಡೆಯಾದ ಕನಿಷ್ಠ ಎಂಟು ವಾರಗಳ ನಂತರ ಒಟಿಟಿಯಲ್ಲಿ ತೆರೆಕಾಣಬೇಕು ಎಂಬ ಸೊಲ್ಲು ಎದ್ದಿದೆ.

ನಿರ್ಮಾಪಕರಾದ ಎಸ್.ಆರ್. ಪ್ರಭು, ವೆಟ್ರಿ ಥಿಯೇಟರ್ಸ್ ಮಾಲೀಕ ರಾಕೇಶ್ ಗೌತಮನ್, ಪ್ರದರ್ಶಕ ತಿರ್ಪೂರು ಸುಬ್ರಮಣಿಯನ್ ಮೊದಲಾದವರು ಈ ವಿಷಯದ ಚರ್ಚೆಯನ್ನು ಮುನ್ನೆಲೆಗೆ ತಂದಿದ್ದಾರೆ.

ಮಲೆಯಾಳಂನ 'ಮಂಜುಮಲ್ ಬಾಯ್ಸ್' ಹಾಗೂ 'ಪ್ರೇಮಲು' ಚಿತ್ರಗಳು ಥಿಯೇಟರ್‌ಗಳಿಗೆ ದೊಡ್ಡ ಸಂಖ್ಯೆಯ ಜನರನ್ನು ಸೆಳೆದಿವೆ. 'ಮಂಜುಮಲ್ ಬಾಯ್ಸ್' ಅಂತೂ ಏನಿಲ್ಲವೆಂದರೂ 200 ಕೋಟಿ ರೂಪಾಯಿ ಗಳಿಸುವುದು ನಿಶ್ಚಿತವಾಗಿದೆ. ಇಂತಹ ಬೆಳವಣಿಗೆ ತಮಿಳಿಗಿಂತ ಕಡಿಮೆ ಪ್ರೇಕ್ಷಕರು ಇರುವ ಭಾಷೆಯ ಚಿತ್ರರಂಗದಲ್ಲಿ ನಡೆದಿದೆ. ಹೀಗಿರುವಾಗ ತಮಿಳು ಸಿನಿಮಾಗಳನ್ನು ಯಾಕೆ ಬೇಗ ಒಟಿಟಿಯಲ್ಲಿ ಕಾಣಿಸಬೇಕು ಎನ್ನುವುದು ಅವರೆಲ್ಲರ ಒಕ್ಕೊರಲಿನ ಪ್ರಶ್ನೆ.